ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 1417
ಸದಸ್ಯರ ಹೆಸರು	: ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ	: 23.09.2021
ಉತ್ತರಿಸುವ ಸಚಿವರು	: ಮಾನ್ಯ ಮುಖ್ಯಮಂತ್ರಿಯವರು

ಪ್ರಶ್ನೆ	ಉತ್ತರ
ಅ) ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಾದ ಸಂದರ್ಭದಲ್ಲಿ ಮೀಸಲಾತಿಯನ್ನು ಅನುಸರಿಸುವ ಕುರಿತು ಇರುವ ನಿಯಮಾವಳಿಗಳೇನು; (ಪಟ್ಟಿ ನೀಡುವುದು) ಮೀಸಲಾತಿ ಹಾಗೂ ಒಳ ಮೀಸಲಾತಿಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು: (ವರ್ಟಿಕಲ್ ಹಾಗೂ ಹಾರಿಜಂಟಲ್ ಮೀಸಲಾತಿ)	ಭಾರತ ಸಂವಿಧಾನದ ಅನುಚ್ಛೇದ 16(4)ರನ್ವಯ, ದಿನಾಂಕ: 20.6.1995ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 8 ಸೆಹಿಮ 95ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ನೇರ ನೇಮಕಾತಿಗಳಲ್ಲಿ ಪರಿಷ್ಕೃತ ಮೀಸಲಾತಿಯನ್ನು ಜಾರಿಗೊಳಿಸಲಾಗಿರುತ್ತದೆ. ಈ ಆದೇಶದನ್ವಯ, ಈ ಕೆಳಕಂಡಂತೆ ನೇರ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ :- ಸಾಮಾನ್ಯ ವರ್ಗ : ಶೇ. 50 ಪರಿಶಿಷ್ಟ ಜಾತಿ : ಶೇ. 15 ಪರಿಶಿಷ್ಟ ಪಂಗಡ : ಶೇ. 3 ಪ್ರವರ್ಗ- 1 : ಶೇ. 4 ಪ್ರವರ್ಗ-2ಎ : ಶೇ. 15 ಪ್ರವರ್ಗ-2ಬಿ : ಶೇ. 4 ಪ್ರವರ್ಗ-3ಎ : ಶೇ. 4 ಪ್ರವರ್ಗ-3ಬಿ : ಶೇ. 5

	ಮೇಲ್ಕಂಡ ನೇರ ಮೀಸಲಾತಿಯ ಜೊತೆಗೆ ಮಾಜಿ ಸೈನಿಕರಿಗೆ ಶೇಕಡ 10, ಎದ್ದು ಕಾಣುವ ವಿಕಲಚೇತನರಿಗೆ ಗುಂಪು-ಎ ಮತ್ತು ಗುಂಪು-ಬಿ ಹುದ್ದೆಗಳಲ್ಲಿ ಶೇಕಡ 4 ಮತ್ತು ಗುಂಪು-ಸಿ ಮತ್ತು ಡಿ ಹುದ್ದೆಗಳಲ್ಲಿ ಶೇಕಡ 5, ಮಹಿಳೆಯರಿಗೆ ಶೇಕಡ 33, ಯೋಜನಾ ನಿರ್ವಸಿತರಿಗೆ ಗುಂಪು-ಸಿ ಮತ್ತು ಡಿ ಹುದ್ದೆಗಳಲ್ಲಿ ಶೇಕಡ 5, ಗ್ರಾಮೀಣ ಅಭ್ಯರ್ಥಿಗಳಿಗೆ ಶೇಕಡ 25, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿಗಳಿಗೆ ಶೇಕಡ 5 ಮತ್ತು ತೃತೀಯ ಲಿಂಗದ ಅಭ್ಯರ್ಥಿಗಳಿಗೆ ಶೇಕಡ 1 ಸಮತಳ ಮೀಸಲಾತಿಯನ್ನು ಕಲ್ಪಿಸಲಾಗಿರುತ್ತದೆ.
ಆ) ಮೀಸಲಾತಿ ಹಾಗೂ ಒಳ ಮೀಸಲಾತಿ ಬದಲಾವಣೆಗೆ ಇರುವ ಅವಕಾಶಗಳೇನು; ಇದ್ದಲ್ಲಿ, ಯಾವ ಯಾವ ಮೀಸಲಾತಿಗಳಿಗೆ ಬದಲಾವಣೆ ಮಾಡುವ ಅವಕಾಶವಿದೆ;	ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಗುರುತಿಸಲ್ಪಟ್ಟ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳ ಲಭ್ಯತೆಯ ಕೊರತೆಯಿಂದಾಗಿ ಭರ್ತಿ ಮಾಡಲಾಗದಿದ್ದಲ್ಲಿ ಅವುಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ ಮುಂದಕ್ಕೆ ಕೊಂಡೊಯ್ಯತಕ್ಕದ್ದು. ಈ ರಿಕ್ತ ಸ್ಥಾನಗಳನ್ನು ಮೀಸಲಾತಿಯಿಂದ ವಿಮುಕ್ತಿಗೊಳಿಸುವಂತಿಲ್ಲ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳು 3 ವರ್ಷ ಅಥವಾ 3 ನೇರ ನೇಮಕಾತಿಗಳು ಯಾವುದು ನಂತರವೋ ಅಲ್ಲಿಯವರೆಗೆ ಭರ್ತಿಯಾಗದಿದ್ದಲ್ಲಿ, ಪರಿಶಿಷ್ಟ ಜಾತಿಗೆ ಮೀಸಲಾದ ರಿಕ್ತ ಸ್ಥಾನವನ್ನು ಪರಿಶಿಷ್ಟ ಪಂಗಡದ ಅಭ್ಯರ್ಥಿಯಿಂದ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾದ ರಿಕ್ತ ಸ್ಥಾನಗಳನ್ನು ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಮುಂದುವರೆದು, ಮಾಜಿ ಸೈನಿಕರಿಗಾಗಿ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಮಾಜಿ ಸೈನಿಕ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು, ಮಹಿಳಾ ಅಭ್ಯರ್ಥಿಗಳು ಲಭ್ಯವಾಗದೇ ಇದ್ದಲ್ಲಿ ಆಯಾ ವರ್ಗಕ್ಕೆ ಸೇರಿದ ಪುರುಷ ಅಭ್ಯರ್ಥಿಗಳಿಂದ ಭರ್ತಿ ಮಾಡಲು,
ಇ) ಹುದ್ದೆಗಳ ಭರ್ತಿಗೆ ಒಂದು ಬಾರಿ ಅಥವಾ ಒಂದಕ್ಕಿಂತ ಹೆಚ್ಚು ಬಾರಿ ಅರ್ಜಿ ಆಹ್ವಾನಿಸಿದ್ದಲ್ಲಿ, ನಿಗಧಿಪಡಿಸಿದ ಮೀಸಲಾತಿಗೆ ಯಾವುದೇ ಅಭ್ಯರ್ಥಿಯು ಅರ್ಜಿ ಹಾಕದೇ ಹೋದಲ್ಲಿ ಅಂತಹ ಹುದ್ದೆಗಳನ್ನು ಮೀಸಲಾತಿ ಬದಲಾವಣೆ ಮಾಡಿ ಹುದ್ದೆಯನ್ನು ಭರ್ತಿ ಮಾಡಲು ಅವಕಾಶವಿದೆಯೇ; ಈ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಲ್ಲಿನ ಸೇವಾ ನಿಯಮಗಳೇನು;	
ಈ) ಬದಲಾವಣೆಗೆ ಅವಕಾಶ ಇಲ್ಲದೇ ಹೋದಲ್ಲಿ, ಅವಕಾಶ ಮಾಡಿಕೊಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರವನ್ನು ನೀಡುವುದು)	

	ಯೋಜನಾ ನಿರಾಶ್ರಿತ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತ ರಿಕ್ತ ಸ್ಥಾನಗಳನ್ನು ಅದೇ ಪ್ರವರ್ಗಕ್ಕೆ ಸೇರಿದ ಇತರ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು, ತೃತೀಯ ಲಿಂಗದ ಅಭ್ಯರ್ಥಿಗಳು ಲಭ್ಯವಾಗದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಅದೇ ಪ್ರವರ್ಗಕ್ಕೆ ಸೇರಿದ ಪುರುಷ ಅಥವಾ ಮಹಿಳಾ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಸೂಚನೆಗಳನ್ನು ನೀಡಲಾಗಿದೆ. ಒಂದು ವೇಳೆ ಅಧಿಸೂಚಿಸಿರುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಅಂತಹ ರಿಕ್ತ ಸ್ಥಾನವನ್ನು ಮುಂದಿನ ನೇಮಕಾತಿಗೆ ಮುಂದಕ್ಕೊಯ್ಯತಕ್ಕದ್ದು (Carry forward) ಹಾಗೂ ಮುಂದಿನ ನೇಮಕಾತಿಯಲ್ಲಿಯೂ ಅಧಿಸೂಚಿತ ಅಂಗವಿಕಲತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ, ನೇರ ಮೀಸಲಾತಿಯಡಿ ಬರುವ ಆಯಾ ಪ್ರವರ್ಗದ ಇತರ ಅಂಗವಿಕಲತೆಯುಳ್ಳ ಅರ್ಹ ಅಂಗವಿಕಲ ಅಭ್ಯರ್ಥಿಯಿಂದ ಭರ್ತಿ ಮಾಡತಕ್ಕದ್ದು. ಒಂದು ವೇಳೆ ಯಾವುದೇ ಅಂಗವಿಕಲ ಅಭ್ಯರ್ಥಿ ಲಭ್ಯವಿಲ್ಲದಿದ್ದಲ್ಲಿ, ಆಯಾ ಪ್ರವರ್ಗದ ಇತರೆ ಅಭ್ಯರ್ಥಿಯಿಂದ ಭರ್ತಿ ಮಾಡಿಕೊಳ್ಳತಕ್ಕದ್ದೆಂದು ಎಲ್ಲ ನೇಮಕಾತಿ ಪ್ರಾಧಿಕಾರಗಳಿಗೆ ಸೂಚಿಸಲಾಗಿದೆ.

ಸಂಖ್ಯೆ: ಸಿಆಸುಇ 156 ಸೇನೆನಿ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ